# ಕರ್ನಾಟಕ ಲೋಕಾಯುಕ್ತ

Compt/Uplok/BGM/1833/2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ-1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 08-03-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಗುರುಸಿದ್ದಪ್ಪಾ ರಾಮಪ್ಪಾ @ ರಾಯಪ್ಪ ಹಾವಣ್ಣವರ, ಕಂದಾಯ ನಿರೀಕ್ಷಕರು (ಪ್ರಥಮ ದರ್ಜೆ ಸಹಾಯಕ), ತಹಶೀಲ್ದಾರ್ ಕಚೇರಿ, ರಾಯಭಾಗ, ಬೆಳಗಾವಿ ಜಿಲ್ಲೆ,** - ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬೆಳಗಾವಿ, ಬೆಳಗಾವಿ ಜಿಲ್ಲೆ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಗುರುಸಿದ್ದಪ್ಪಾ ರಾಮಪ್ಪಾ @ ರಾಯಪ್ಪ ಹಾವಣ್ಣವರ, ಕಂದಾಯ ನಿರೀಕ್ಷಕರು (ಪ್ರಥಮ ದರ್ಜೆ ಸಹಾಯಕ), ತಹಶೀಲ್ದಾರ್ ಕಚೇರಿ, ರಾಯಭಾಗ, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ನಿಂಗಪ್ಪಾ ಪಿಡಾಯಿ, ಬಿನ್ ಶ್ರೀ ಯಮನಪ್ಪಾ ಪಿಡಾಯಿ, ಪಿಡಾಯಿ ತೋಟ ಕಟಕಭಾಂವಿ, ತಾ: ರಾಯಭಾಗ, ಬೆಳಗಾವಿ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ದೂರಿನಲ್ಲಿ, ತನ್ನ ತಂದೆ ಯಮನಪ್ಪಾ 2007 ರಲ್ಲಿ ತೀರಿಕೊಂಡಿರುತ್ತಾರೆ. ತನ್ನ ತಾಯಿ ನಿಂಗವ್ವಾ ತನ್ನೊಂದಿಗೆ ವಾಸವಾಗಿರುತ್ತಾರೆ. ದೂರುದಾರರ ತಂದೆಗೆ ಆರು ಜನ ಗಂಡು ಮಕ್ಕಳು, ಒಬ್ಬಳು ಹೆಣ್ಣು ಮಗಳು ಇರುತ್ತಾರೆ. ತನ್ನ ತಾಯಿ ನಿಂಗವ್ವಾ ಇವರ ತಂದೆ ಲಕ್ಷ್ಮಣ ಲಕ್ಕಪ್ಪ ಪಕಾಂಡಿ. ಸದರಿ ಲಕ್ಷ್ಮಣ ಲಕ್ಕಪ್ಪ ಪಕಾಂಡಿ ರವರಿಗೆ ದೂರುದಾರರ ತಾಯಿ (ನಿಂಗವ್ವಾ) ಒಬ್ಬಳೆ ಮಗಳಾಗಿರುತ್ತಾಳೆ. ಲಕ್ಷ್ಮಣ ಲಕ್ಕಪ್ಪ ಪಕಾಂಡಿ ಇವರಿಗೆ ಟೆನೆಸ್ನೆ ಕಾಯ್ದೆಯಡಿಯಲ್ಲಿ ಬಂದಿದ್ದ ಬ್ಯಾಕೂಡ ಗ್ರಾಮದ ರಿ, ಸನಂ. 194/1 ರಲ್ಲಿ ಕ್ಷೇತ್ರ 9 ಎಕರೆ 26 ಗುಂಟೆ ಹಾಗೂ ಕಟಕಭಾಂವಿ

ಗ್ರಾಮದ ರಿ. ಸ. ನಂ: 186/8 ರಲ್ಲಿ ಕ್ಷೇತ್ರ 1 ಎಕರೆ 34 ಗುಂಟೆ ಜಮೀನನ್ನು ಅವರ ಮೊಮ್ಮಕ್ಕಳಾದ ಇವರು ಅಂದರೆ 1) ಮುದಕಪ್ಪ 2) ಸತ್ಯಪ್ಪ 3) ನಿಂಗಪ್ಪ 4) ಲಕ್ಷ್ಮಣ (ಲಕ್ಷ್ಮಣ ಲಕ್ಕಪ್ಪ ಪಕಾಂಡಿ ಇವರ ಮಕ್ಕಳು) ಇವರ ಹೆಸರಿಗೆ ದಿನಾಂಕ: 04.08.1981 ರಂದು ಮಾಡಿ ಆದೇಶ ಆಗಿರುತ್ತದೆ. ಆವಾಗಿನಿಂದ ಸದರಿ ಜಮೀನುಗಳನ್ನು ಇವರೇ ಉಳುಮೆ ಮಾಡಿಕೊಂಡು ಹೋಗುತ್ತಿರುತ್ತಾರೆ. ಸದರಿ ಜಮೀನುಗಳ ಆರ್.ಟಿ.ಸಿ ಉತಾರ ಕಲಂ 10 ಮತ್ತು 11 ರಲ್ಲಿ TNC/SR457/23.10.81(2004) RTS DST/SR/10.4.78 73/2004 -2005 MR ನೇ ಪ್ರಕಾರ ರದ್ದು ಆಶನ 35/03-04 ಕೆಎಲ್‌ಆರ್ ಫಾರ್ಮ ಮೇಲೆ ರೀ ಷರತ್ತುಗಳು ಅಂತ ನಮೂದ ಆಗಿರುತ್ತದೆ. ಇದರಿಂದ ಇವರಿಗೆ ಯಾವುದೇ ಸರಕಾರದ ಸವಲತ್ತುಗಳು ಹಾಗೂ ಬ್ಯಾಂಕ್ ಸಾಲ ಸಿಗುತ್ತಿರಲಿಲ್ಲ.

3. 2006ನೇ ಸಾಲಿನಲ್ಲಿ ರಿ.ಸ ನಂ.194/1 ರಲ್ಲಿ ಕಲಂ 11 ರಲ್ಲಿ ಇರುವ ಷರತ್ತುಗಳನ್ನು ತಹಶೀಲ್ದಾರ ರಾಯಭಾಗ ಇವರಿಗೆ ಅರ್ಜಿ ಕೊಟ್ಟು ಷರತ್ತುಗಳನ್ನು ಕಡಿಮೆ ಮಾಡಿಸಿಕೊಂಡಿದ್ದರು. ದಿನಾಂಕ: 20.05.2017 ರಲ್ಲಿ ದೂರುದಾರರು ರಿ.ಸ ನಂ: 186/8 ರ ಕಲಂ ನಂ.11 ರಲ್ಲಿ ಇರುವ ಷರತ್ತುಗಳನ್ನು ಕಡಿಮೆ ಮಾಡಿ ಸದರಿ ಜಮೀನನ್ನು ರೈತಾವಾ ಅಂತಾ ಆದೇಶ ಮಾಡಿ ನಿರಪೇಕ್ಷಣಾ ಪತ್ರಮಾಣ ಪತ್ರ ನೀಡಲು ತಹಶೀಲ್ದಾರ ರಾಯಭಾಗ ಇವರಿಗೆ ಅರ್ಜಿ ನೀಡಿದ್ದರು. ನಂತರ ಸದರಿ ಅರ್ಜಿಯು ಕುಡಚಿ ಕಂದಾಯ ನಿರೀಕ್ಷಕರ ಕಡೆಗೆ ಹೋದಾಗ, ಅವರು ದೂರುದಾರರನ್ನು ಕರೆಯಿಸಿ ಅವರ ಅರ್ಜಿಯ ಬಗ್ಗೆ ವಿಚಾರಿಸಿ ತಹಶೀಲ್ದಾರ್ ರಾಯಭಾಗ ಇವರಿಗೆ ಜವಾಬು ನೀಡಿ ಎಲ್ಲ ದಾಖಲಾತಿಗಳನ್ನು ಮರಳಿ ದೂರುದಾರರಿಗೆ ನೀಡಿರುತ್ತಾರೆ. ನಂತರ ದೂರುದಾರರು ತನ್ನ ಬಳಿ ಇದ್ದ ಕುಡಚಿ ಕಂದಾಯ ನಿರೀಕ್ಷಕರ ವರದಿಯ ಪ್ರತಿಯನ್ನು ದಿನಾಂಕ: 31-05-2017 ರಂದು ತಹಶೀಲ್ದಾರ ರಾಯಭಾಗ ಕಚೇರಿಯ ಟಪಾಲ್ ವಿಭಾಗಕ್ಕೆ ಕೊಟ್ಟು, ನಂತರ ಈ ಕೆಲಸಕ್ಕೆ ಸಂಬಂಧಿಸಿದ ಎದುರುದಾರರನ್ನು ಭೇಟ್ಟಿಯಾಗಿರುತ್ತಾರೆ. ಅವರು ದೂರುದಾರರಿಗೆ 2-3 ದಿನ ಬಿಟ್ಟು ಬರಲು ತಿಳಿಸಿದರು. ಆ ಪ್ರಕಾರ ದೂರುದಾರರು ದಿನಾಂಕ: 05-06-2017ರಂದು ಎದುರುದಾರರನ್ನು ಭೇಟಿಯಾದಾಗ ನಿನ್ನ ಎಲ್ಲ ಕೆಲಸ ಮಾಡಿದ್ದೇನೆ. ತಹಶೀಲ್ದಾರರ ಸಹಿ ಮಾಡಿಸುವುದಷ್ಟೇ ಬಾಕಿ ಇದೆ, ನೀನು ನನಗೆ ರೂ 3000/- ಲಂಚ ನೀಡಿದರೆ ಮಾತ್ರ ತಹಶೀಲ್ದಾರರ ಸಹಿ ಮಾಡಿಸಿ ನೆಮ್ಮದಿ ಕೇಂದ್ರಕ್ಕೆ ಶರತ್ತು ಕಡಿಮೆ ಮಾಡಲು ಕೊಡುತ್ತೇನೆ ಅಂತಾ ಹೇಳಿದರು. ಆಗ ದೂರುದಾರರು ಇಷ್ಟು ಹಣ ಬಹಳ ಆಗುತ್ತದೆ ಸ್ವಲ್ಪ ಕಡಿಮೆ ಮಾಡಿ, ಎಂದು ಕೇಳಿದಾಗ, ಆಗೋದಿಲ್ಲ ಅಷ್ಟು ಹಣ ಕೊಟ್ರೆ ಮಾತ್ರ ನಿನ್ನ ಕೆಲಸ ಮಾಡಿಸಿಕೊಡುತ್ತೇನೆ ಎಂದು ಎದುರುದಾರರು ಹೇಳಿರುತ್ತಾರೆ. ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆಯನ್ನು ದೂರುದಾರರು ತನ್ನ ಮೊಬೈಲ್‌ನಲ್ಲಿ ದಾಖಲುಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದರಿಂದ, ಎದುರುದಾರರ ವಿರುದ್ಧ ದಿನಾಂಕ: 06-06-2017 ದೂರನ್ನು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಬೆಳಗಾವಿ, ಇವರಿಗೆ ಕೊಟ್ಟಿರುತ್ತಾರೆ. ಆ ಸಂಬಂಧವಾಗಿ ಮೊ.ಸಂಖ್ಯೆ: 09/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7,13(1)(ಡಿ) ಸ/ವಾ 13(2) ಅಡಿಯಲ್ಲಿ ಪ್ರಕರಣ ದಾಖಲು ಮಾಡಿಕೊಂಡಿರುತ್ತಾರೆ.

4. ದಿನಾಂಕ: 07-06-2017 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಮಹಾಂತೇಶ ಬಸನಗೌಡಾ ಪಾಟೀಲ, ಪಂಚ-1, ಶ್ರೀ ಗಡ್ಡೆಪ್ಪಾ ಶ್ರೀಶೈಲ್ ಕೋರಸಗಾವ, ಪಂಚ-2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3000/- (ಹಣದ ಡಿನಾಮಿನೇಷನ್ 2000 x 1, 500 x 1, 100 x 4, 50 x 2) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರುಗಳು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿ, ಪಂಚ-1 ಅದನ್ನು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆಯ ಮೇರೆಗೆ ಪಂಚ-2 ಶ್ರೀ ಗಡ್ಡೆಪ್ಪಾ ಶ್ರೀಶೈಲ್ ಕೋರಸಗಾವ, ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 3,000/- ರೂ.ಗಳ ಹಣವನ್ನು ಎಣಿಸಿ, ದೂರುದಾರರ ಪ್ಯಾಂಟಿನ ಹಿಂದೆ ಇರುವ ಬಲಗಡೆ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಕರವಸ್ತ್ರ ದಿಂದ ಮುಖ ಒರೆಸಿಕೊಳ್ಳುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ಪಂಚ-2 ಶ್ರೀ ಗಡ್ಡೆಪ್ಪಾ ಶ್ರೀಶೈಲ್ ಕೋರಸಗಾವ, ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ತನಿಖಾಧಿಕಾರಿ ದೂರುದಾರರಿಗೆ ಒಂದು ವಾಯ್ಸ್ ರೆಕಾರ್ಡ್ ನೀಡಿ ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ ದಿ: 07/06/2017ರಂದು ಬೆ: 7.15 ರಿಂದ 8.45 ಘಂಟೆಯವರೆಗೆ ಬರೆದಿರುತ್ತಾರೆ.

5. ಅದೇ ದಿನ ಅಂದರೆ, ದಿನಾಂಕ: 07-06-2017 ರಂದು ತನಿಖಾಧಿಕಾರಿರವರು ಪಂಚರನ್ನು ದೂರುದಾರರನ್ನು ಹಾಗೂ ಸಿಬ್ಬಂದಿಯನ್ನು ಕರೆದುಕೊಂಡು ಎದುರುದಾರರ ಕಚೇರಿ ಇರುವ ಮಿನಿ ವಿಧಾನಸೌಧ ರಾಯಭಾಗ ಹತ್ತಿರ ಸುಮಾರು 11.30ಕ್ಕೆ ಬಂದಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ದೂರುದಾರರು ಮತ್ತು ಪಂಚ-1 ಎದುರುದಾರರ ಕಚೇರಿಗೆ ಹೋಗಿ ದೂರುದಾರರು ಎದುರುದಾರರನ್ನು ತನ್ನ ಕೆಲಸದ ಬಗ್ಗೆ ಏನು ಮಾಡಿದ್ದೀರಿ ಎಂದು ಕೇಳಿದಾಗ, ತಹಶೀಲ್ದಾರ್ ಸಾಹೇಬರು ಬರಲಿ, ಸಹಿ ಮಾಡಿಸಿಕೊಡುತ್ತೇನೆ, ಹೊರಗೆ ಇರಿ, ಎಂದು ಹೇಳಿದರು. ನಂತರ 45 ನಿಮಿಷ ಬಿಟ್ಟು ದೂರುದಾರರು ಎದುರುದಾರರನ್ನು ಭೇಟಿಯಾದಾಗ ಅವರು ಮೊನ್ನೆ ಹೇಳಿದ್ದು ಏನು ಮಾಡಿದ್ದೀರಿ ಎಂದು ಕೇಳಿದರು. ಆಗ ದೂರುದಾರರು ಮೊನ್ನೆ ನೀವು ಹೇಳಿದಹಾಗೆ 3000/- ರೂ.ಗಳನ್ನು ತಂದಿದ್ದೀನಿ ಎಂದು ಹೇಳಿದಾಗ, ಎದುರುದಾರರು ಮಿನಿ ವಿಧಾನಸೌಧದ ಹೊರಗೆ ಎಡಗಡೆ ಬಾಜು ಕರೆದುಕೊಂಡು ಹೋಗಿ ನೀ ಮೊನ್ನೆ ರೊಕ್ಕಾ ಕೊಟ್ಟಿದ್ದರೆ ಇಷ್ಟೊತ್ತಿಗೆ ಎಲ್ಲಾ ಸಹಿ ಮಾಡಿಸಿ ರಸೀದಿ ತೆಗೆಸಿ ಕೊಡುತ್ತಿದ್ದಿನಿ ಅಂತಾ ಹೇಳಿ, ಈಗ ರೊಕ್ಕಾ ಕೊಡು ಎಂದು ಕೇಳಿದಾಗ, ದೂರುದಾರರು ತಮ್ಮ ಬಳಿ ಇದ್ದ ಪಿನಾಪ್ತಲಿನ್ ಪೌಡರ್ ಲೇಪಿತ ರೂ.3,000/- ಲಂಚದ ಹಣವನ್ನು ಎದುರುದಾರರಿಗೆ ನೀಡಿದಾಗ, ಅವರು ತನ್ನ ಬಲಗೈಯಿಂದ ಸ್ವೀಕರಿಸಿ ನೋಟುಗಳನ್ನು ಪಡೆದು ಎರಡೂ

ಕೈಗಳಿಂದ ಎಣಿಸಿ ತನ್ನ ಪ್ಯಾಂಟಿನ ಬಲಗಡೆ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಮ: 12.25ಕ್ಕೆ ನೀಡಿದ ನಂತರ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ, ತನಿಖಾಧಿಕಾರಿ ತನ್ನನ್ನು ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾದ ಬಗ್ಗೆ ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ಸೂಚನೆ ಮೇರೆಗೆ, ಸಿಬ್ಬಂದಿ ಎದುರುದಾರರ ಎರಡೂ ಕೈ ಬೆರಳುಗಳನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ಪ್ರತ್ಯೇಕವಾಗಿ ತೊಳೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ, ಹಾಗೂ ತನಿಖಾಧಿಕಾರಿಯವರು ಎದುರುದಾರರಿಗೆ ಲಂಚದ ಹಣವನ್ನು ಹಾಜರುಪಡಿಸುವಂತೆ ಸೂಚಿಸಿದಾಗ, ಅವರು ತನ್ನ ಪ್ಯಾಂಟಿನ ಬಲಗಡೆ ಜೇಬಿನಲ್ಲಿದ್ದ ಹಣವನ್ನು ಹಾಜರುಪಡಿಸಿದ್ದು, ಸದರಿ ಹಣವನ್ನು ತನಿಖಾಧಿಕಾರಿ ಸೂಚನೆ ಮೇರೆಗೆ ಪಂಚ-2 ಪರಿಶೀಲಿಸಿ ಮೌಲ್ಯ ಮತ್ತು ನೋಟಿನ ನಂಬರುಗಳನ್ನು ವಹಿಸುವಿಕೆ ಪಂಚನಾಮೆ ವೇಳೆಯಲ್ಲಿ ಬರೆದ ನೋಟಿನ ವಿವರಗಳಿಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡ ನಂತರ, ಅಮಾನತ್ತುಪಡಿಸಿಕೊಂಡಿರುತ್ತಾರೆ. ಹಾಗೂ ಎದುರುದಾರರ ಪ್ಯಾಂಟಿನ ಬಲಭಾಗದ ಜೇಬಿನ ಒಳಭಾಗವನ್ನು ಸೋಡಿಯಂ ಕಾರ್ಬೋನೈಟ್ ದ್ರಾವಣದಿಂದ ತೊಳೆದಾಗ, ದ್ರಾವಣ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

6. ನಂತರ ತನಿಖಾಧಿಕಾರಿಯು ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣಕ್ಕೆ ಸಂಬಂಧಿಸಿದಂತೆ ಸಮಜಾಯಿಷಿಕೆ ಕೇಳಿದಾಗ ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ **"ನಾನು ಪ್ರ.ದ.ಸ ತಹಶೀಲ್ದಾರ್ ಕಾರ್ಯಾಲಯ ರಾಯಭಾಗದಲ್ಲಿ ಕೆಲಸ ನಿರ್ವಹಸುತ್ತಾ ಇದ್ದಾಗ ಶ್ರೀ ನಿಂಗಪ್ಪ ಮುದುಕಪ್ಪ ಪಿಡಾಯಿ ಇವರು ಖಟಕಭಾಂವಿ ಗ್ರಾಮದ ರಿ ಸ ನಂ 186/8 ನೇದ್ದರ ಪಹಣಿ ಪತ್ರಿಕೆ ಅಂಕಣ-11 ರಲ್ಲಿ 15 ವರ್ಷ ಪರಭಾರೆ ಮಾಡಬಾರದು ಎಂಬ ಷರತ್ತು ಕಡಿಮೆ ಮಾಡಲು ದಿನಾಂಕ: 22/5/2017 ರಂದು ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು, ಕಂದಾಯ ನಿರೀಕ್ಷಕರು ಕುಡಚಿ ಇವರು ಮರು ಪರಿಶೀಲಿಸಿ ದಿನಾಂಕ: 1/6/2017 ರಂದು ವರದಿ ಸಲ್ಲಿಸಿದ್ದರು. ಸದರಿ ಅರ್ಜಿಯನ್ನು ಪರಿಶೀಲಿಸಿ ಮಾನ್ಯ ತಹಶೀಲ್ದಾರರು ರಾಯಭಾಗ ಇವರಿಗೆ ಆದೇಶ ರುಜುಗಾಗಿ ಇಡಲಾಗಿದೆ. ಸದರಿ ವಿಷಯದ ಬಗ್ಗೆ ನನಗೆ ರೂ 3,000/- ತೆಗೆದುಕೊಳ್ಳುವಂತೆ ತಿಳಿಸಿದರು. ನಾನು ಸದರಿ ಹಣವನ್ನು ತೆಗೆದುಕೊಂಡಿದ್ದು ನಿಜ ಇದೆ. ಸದರಿ ಪ್ರಕರಣದ ಬಗ್ಗೆ ಯಾವುದೇ ಹಣ ಪಡೆದಿರುವುದಿಲ್ಲ. ಸದರಿ ನನಗೆ ಅಡಚಣೆ ಇರುವುದ್ದರಿಂದ ಹಣ ಕೊಡಲು ತಿಳಿಸಿದೆನು ಅದೆ ಹಣವನ್ನು ಸ್ವಿಕರಿಸಿದ್ದು ಇರುತ್ತದೆ. ನಾನು ಯಾವುದೇ ಲಂಚ ಅಂತಾ ಸ್ವಿಕರಿಸಿರುವುದಿಲ್ಲವೆಂದು ಸಮಜಾಯಿಷಿಕೆ ನೀಡಿರುತ್ತಾರೆ"**. ಸದರಿ ಸಂಭಾಷಣೆಯ ಬಗ್ಗೆ ಅಭಿಪ್ರಾಯವನ್ನು ತನಿಖಾಧಿಕಾರಿಯು ದೂರುದಾರರು ಮತ್ತು ಪಂಚ-1 ರವರನ್ನು ಕೇಳಲಾಗಿ, ಎದುರುದಾರರು ಸುಳ್ಳು ಸಮಾಜಾಯಿಷಿಯನ್ನು ಬರೆದುಕೊಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ, ತನಿಖಾಧಿಕಾರಿಯವರು ಟ್ರಾಪ್ ಪಂಚನಾಮೆಯನ್ನು ದಿ: 07/06/2017 ರಂದು ಮ: 12.25 ರಿಂದ 17.00 ಗಂಟೆಯವರೆಗೆ ಪಂಚರ ಸಮಕ್ಷಮ ಬರೆದಿರುತ್ತಾರೆ.

7. ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಮಾದರಿ ಧ್ವನಿಗೆ ಹೋಲಿಕೆ ಇರುವುದಾಗಿ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ.

8. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

9. ಗೌರವಾನ್ವಿತರ ಆದೇಶದ ಅನ್ವಯ, ದಿ: 05/10/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಕೆಯನ್ನು ಕೇಳಲಾಗಿ, ಎದುರುದಾರರು ದಿ: 06/11/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ನೀಡಿರುತ್ತಾರೆ. ಎದುರುದಾರರ ವಿವರಣೆಯನ್ನು ಪರಿಶೀಲಿಸಿದಾಗ, ಎದುರುದಾರರು ದೂರುದಾರರಿಂದ ಯಾವುದೇ ಲಂಚದ ಹಣವನ್ನು ಕೇಳಿಲ್ಲ ಹಾಗೂ ಪಡೆದಿಲ್ಲವೆಂದು ಹೇಳಿರುತ್ತಾರೆ. ಎದುರುದಾರರು ಲಂಚದ ಹಣ ಕೇಳಿದ ಬಗ್ಗೆ ದಾಖಲಿಸಲಾದ ಸಂಭಾಷಣೆಯನ್ನು ಪ್ರಕರಣಕ್ಕೆ ಸೃಷ್ಟಿಸಲಾಗಿರುತ್ತದೆ. ತನಿಖಾಧಿಕಾರಿಯು ಎದುರುದಾರರ ಧ್ವನಿ ಹಾಗೂ ಮಾದರಿ ಧ್ವನಿಗೆ ಪೂರಕವಾಗಿ ಪಡೆದಿರುವ ವರದಿಯು ಸೃಷ್ಟಿಸಲಾಗಿರುತ್ತದೆ ಎಂದು ಹೇಳಿರುತ್ತಾರೆ. ಹಾಗಾಗಿ ತಾನು ನಿವೃತ್ತಿಯಾಗಿದ್ದು, ಅನಾರೋಗ್ಯದಿಂದ ಬಳಲುತ್ತಿದ್ದು, ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಇವರನ್ನು ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

10. ಎದುರುದಾರರು ದಿನಾಂಕ: 30-04-2018 ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ್ದು, ಕರ್ನಾಟಕ ಸಿವಿಲ್ ಸರ್ವಿಸ್ ನಿಯಮಾಳಿ 214 (2) (ಬಿ)(i) ರ ಪ್ರಕಾರ, ಸರ್ಕಾರಿ ನೌಕರನು ಕರ್ತವ್ಯದಿಂದ ನಿವೃತ್ತಿ ಹೊಂದಿದ ನಂತರ 4–ವರ್ಷಗಳವರೆಗೆ ಇಲಾಖಾ ವಿಚಾರಣೆಯನ್ನು ಸರ್ಕಾರದ ಅನುಮತಿ ಪಡೆದು ತೆಗೆದುಕೊಳ್ಳಬಹುದಾಗಿದೆ. ಆದುದರಿಂದ ಎದುರುದಾರರ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

11. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

12. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ಧೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/3/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು